ನಿ-330-96

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ – 330 ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಉತ್ತರ**

**ವಿಷಯ:** ವೈದ್ಯಕೀಯ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ:ಎಂಇಡಿ:95:ಆರ್‌ಜಿಯು:2019, ದಿನಾಂಕ:31.12.2019ರನ್ವಯ ಕರ್ನಾಟಕ ರಾಜ್ಯದಲ್ಲಿ ಮಾತ್ರ ಸರ್ಕಾರಿ ವೈದ್ಯಕೀಯ ಸಂಸ್ಥೆಗಳನ್ನು ಎ.ಬಿ.ಸಿ.ಡಿ ಎಂದು ವಿಂಗಡಿಸಿರುವುದರಿಂದ ಕಾರ್ಯನಿರತ ವೈದ್ಯರ ವರ್ಗಾವಣೆಯಲ್ಲಿ ಹಾಗೂ ಪ್ರಾದೇಶಕ/ಪ್ರಾಂತ್ಯವಾರು ಅನ್ಯಾಯ ಹಾಗೂ ತಾರತಮ್ಯಕ್ಕೊಳಗಾಗಿರುವ ಗಂಭೀರ ಸಮಸ್ಯೆ ಕುರಿತು.

*******

ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವೈದ್ಯಕೀಯ ಕಾಲೇಜುಗಳು ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಸ್ವಾಯತ್ತ ಸ್ಥಾನಮಾನ(Autonomous Status) ವನ್ನು ಹೊಂದಿದ್ದು, ತಮ್ಮದೇ ಆದ ಬೈಲಾ(Bye-law)ವನ್ನು ಹೊಂದಿರುತ್ತದೆ.

ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳು ಅಳವಡಿಸಿಕೊಂಡಿರುವ ಸಾಮಾನ್ಯ ಬೈಲಾದ ನಿಯಮ(12)ರಲ್ಲಿ ಬೋಧಕ ಹಾಗೂ ತಾಂತ್ರಿಕ ವೃಂದದ ಸಿಬ್ಬಂದಿಗಳ ವರ್ಗಾವಣೆಯ ಬಗ್ಗೆ ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.

> " Generally, there shall be no Transfers of Teaching and Non-Teaching Staff recruited or absorbed by the Institute from one Autonomous Institute to another Autonomous Institute. However, Under extra-ordinary circumstances and for the reasons to be recorded in writing, the Government shall have the powers to transfer any teaching or technical staff from one autonomous institute to another autonomous institute. The teaching or technical staff so transferred shall be shown last in the seniority list of that category, to which he has been transferred to, irrespective of this seniority in the parent institute. No such transfer can be considered without a resolution of the respective governing council to spare/accept a person."

ಆ ಪ್ರಕಾರ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳು ಅಳವಡಿಸಿಕೊಂಡಿರುವ ಸಾಮಾನ್ಯ ಬೈಲಾದನ್ವಯ ಅಂತರ್- ಸಂಸ್ಥೆಗಳ ಸಾಮಾನ್ಯ ವರ್ಗಾವಣೆಗೆ ಅವಕಾಶ ನೀಡಿರುವುದಿಲ್ಲ. ಆದರೆ ಅಸಾಮಾನ್ಯ ಪ್ರಕರಣಗಳಲ್ಲಿ ಮಾತ್ರ ಕಾರಣವನ್ನು ಲಿಖಿತವಾಗಿ ನಮೂದಿಸಿ ವರ್ಗಾಯಿಸಿ ಆದೇಶಿಸಲು ಸರ್ಕಾರಕ್ಕೆ ಅವಕಾಶ ಕಲ್ಪಿಸಲಾಗಿರುತ್ತದೆ. ಇಷ್ಟು ವರ್ಷಗಳಲ್ಲಿ ಸರ್ಕಾರದ ವಿಶೇಷಾಧಿಕಾರವನ್ನು ಬಳಸಿ ವರ್ಗಾವಣೆ ಪ್ರಸ್ತಾವನೆಗಳನ್ನು ಪರಿಗಣಿಸಲು ಯಾವುದೇ ರೀತಿಯ ವರ್ಗಾವಣೆ ಮಾನದಂಡಗಳು ಮತ್ತು ನೀತಿಗಳನ್ನು ರೂಪಿಸಿರಲಿಲ್ಲ. ಇದರಿಂದ ವರ್ಗಾವಣೆ ಕುರಿತಂತೆ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಇತ್ಯರ್ಥಪಡಿಸುವಲ್ಲಿ ಸಾಕಷ್ಟು ಗೊಂದಲ ಉಂಟಾಗಿ ಸ್ಪಷ್ಟ ತೀರ್ಮಾನ ಕೈಗೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ನಿರ್ದಿಷ್ಟ ವರ್ಗಾವಣೆ ನೀತಿ-ನಿಯಮಗಳನ್ನು ರೂಪಿಸುವುದು ಅತ್ಯವಶ್ಯಕವಾಗಿದ್ದರಿಂದ ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ವರ್ಗಾವಣೆ ಕುರಿತಂತೆ ವರ್ಗಾವಣೆ ಮಾರ್ಗಸೂಚಿಗಳನ್ನು ರೂಪಿಸಿ ಸರ್ಕಾರಿ

ಆದೇಶ ಸಂಖ್ಯೆ:ಎಂಇಡಿ 95 ಆರ್ ಜಿಯು 2019, ದಿನಾಂಕ:31.12.2019 ಹಾಗೂ ತಿದ್ದುಪಡಿ ದಿನಾಂಕ:10.02.2020 ರಲ್ಲಿ ಆದೇಶಿಸಲಾಗಿರುತ್ತದೆ.

ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ವೈದ್ಯಕೀಯ ಕಾಲೇಜುಗಳು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಹಾಗೂ ಸರ್ಕಾರಿ ದಂತ ವೈದ್ಯಕೀಯ ಕಾಲೇಜುಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳು ಒಂದು ಸ್ವಾಯತ್ತ ಸಂಸ್ಥೆಯಿಂದ ಮತ್ತೊಂದು ಸ್ವಾಯತ್ತ ಸಂಸ್ಥೆಗೆ ವರ್ಗಾಯಿಸುವಂತೆ ಕೋರಿ ವರ್ಷವಿಡೀ ಹೆಚ್ಚಿನ ಸಂಖ್ಯೆಯಲ್ಲಿ ಮನವಿಗಳನ್ನು ಸರ್ಕಾರಕ್ಕೆ ಸಲ್ಲಿಸುತ್ತಿದ್ದರಿಂದ ಸ್ವಾಯತ್ತ ಸಂಸ್ಥೆಗಳ ಕಾರ್ಯನಿರ್ವಹಣೆ ಮೇಲೆ ಸಾಕಷ್ಟು ಪ್ರತಿಕೂಲ ಪರಿಣಾಮ ಉಂಟಾಗುತ್ತಿದ್ದನ್ನು ಮತ್ತು ಬೋಧಕ ಸಿಬ್ಬಂದಿಗಳ ವರ್ಗಾವಣೆಗಳಿಂದ ಸ್ವಾಯತ್ತ ವೈದ್ಯಕೀಯ ಸಿಬ್ಬಂದಿಗಳ ಸಂಖ್ಯೆಯಲ್ಲಿ ವ್ಯತ್ಯಯ ಆಗಿ ಭಾರತೀಯ ವೈದ್ಯಕೀಯ ಪರಿಷತ್ತಿನ ತಪಾಸಣೆಯಲ್ಲಿ ಬೋಧಕ ಸಿಬ್ಬಂದಿಗಳ ಕೊರತೆಯ ಬಗ್ಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿ ವೈದ್ಯಕೀಯ ಕಾಲೇಜುಗಳ ಶೈಕ್ಷಣಿಕ ಮಾನ್ಯತೆಯನ್ನು ರದ್ದುಪಡಿಸುವಂತಹ ಸಂದರ್ಭಗಳು ಉದ್ಭವವಾಗಿದ್ದರಿಂದ ವರ್ಗಾವಣೆ ಮಾರ್ಗಸೂಚಿಗಳನ್ನು ರೂಪಿಸುವುದು ಅವಶ್ಯಕವಾಗಿತ್ತು.

ಸರ್ಕಾರಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ಸಾಕಷ್ಟು ಸೇವೆ ಸಲ್ಲಿಸಿ ಮುಂದಿನ ವೃಂದಕ್ಕೆ ಮುಂಬಡ್ತಿ ಪಡೆಯಲು ಅರ್ಹರಾದ ವೈದ್ಯರಿದ್ದರೂ ಸಹ ಮುಂದಿನ ವೃಂದದಲ್ಲಿ ಹುದ್ದೆ ಖಾಲಿ ಇದೆ ಎಂಬ ಕಾರಣ ನೀಡಿ ವರ್ಗಾವಣೆ ಮುಖೇನ ಭರ್ತಿ ಮಾಡುತ್ತಿದ್ದರಿಂದ ಸಂಸ್ಥೆಗಳಲ್ಲಿ ಸಾಕಷ್ಟು ಸೇವೆ ಸಲ್ಲಿಸಿದ್ದ ವೈದ್ಯರು ತಮಗೆ ಮುಂಬಡ್ತಿ ಅವಕಾಶಗಳೇ ತಪ್ಪಿ ಅನ್ಯಾಯವಾಗುತ್ತಿದೆ ಎಂದು ಹಾಗೂ ಇದು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿಗೆ ವಿರುದ್ಧವಾಗಿರುತ್ತದೆ ಎಂದು ದೂರಿದ್ದು, ಇದರಿಂದ ದೀರ್ಘ ಸೇವೆ ಸಲ್ಲಿಸಿದ್ದ ವೈದ್ಯರು/ಸಿಬ್ಬಂದಿ ಮುಂಬಡ್ತಿಗಳಿಂದ ವಂಚಿತರಾಗುತ್ತಿದ್ದುದನ್ನು ತಡೆಯುವ ದೃಷ್ಟಿಯಿಂದ ವರ್ಗಾವಣೆ ಮಾರ್ಗಸೂಚಿಗಳನ್ನು ರೂಪಿಸಲಾಗಿರುತ್ತದೆ.

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಕಿದ್ವಾಯಿ ಕ್ಯಾನ್ಸರ್ ಸಂಸ್ಥೆ, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಕರ್ನಾಟಕ ಮಧುಮೇಹ ಸಂಸ್ಥೆ, ಎಸ್ ಡಿ.ಎಸ್. ಟಿ.ಆರ್.ಸಿ ಮತ್ತು ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆ, ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ, ನೆಫ್ರೋ ಯುರಾಲಜಿ ಸಂಸ್ಥೆ, ಗ್ಯಾಸ್ಟ್ರೋ ಎಂಟ್ರಾಲಜಿ ಸಂಸ್ಥೆ ಇವುಗಳು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಾಗಿದ್ದು, ಇವುಗಳು ಒಂದೊಂದು ವೈದ್ಯಕೀಯ ವಿಭಾಗದಲ್ಲೂ ಉತ್ಕೃಷ್ಟ ವೈಶಿಷ್ಟ್ಯತೆಯನ್ನು ಹೊಂದಿರುತ್ತವೆ. ಅಲ್ಲದೇ ಸದರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥರುಗಳು ತಮ್ಮಲ್ಲಿ ನೇಮಕಾತಿಯಾದ ಸಿಬ್ಬಂದಿಗಳಿಗೆ ವಿಶೇಷ ಕೌಶಲ್ಯ ತರಬೇತಿ ನೀಡಿ ವೃತ್ತಿ ನೈಪುಣ್ಯತೆ ಹೊಂದುವಂತೆ ತಯಾರು ಮಾಡಿದ್ದು, ಈ ಆಸ್ಪತ್ರೆಗಳು ತೃತೀಯ ಆರೈಕೆ ಆಸ್ಪತ್ರೆಗಳಾಗಿದ್ದು, ನೈಪುಣ್ಯತೆ ಹೊಂದಿದ ಸಿಬ್ಬಂದಿಗಳಿಂದ ಮಾತ್ರ ಪರಿಣಾಮಕಾರಿಯಾಗಿ ಚಿಕಿತ್ಸೆ/ಶುಶ್ರೂಷೆ ನೀಡಲಾಗುತ್ತಿರುತ್ತದೆ. ನೈಪುಣ್ಯತೆ ಇರುವ ಸಿಬ್ಬಂದಿಗಳನ್ನು ಬೇರೆಡೆಗೆ ವರ್ಗಾವಣೆ ಮಾಡಿದಲ್ಲಿ ರೋಗಿಗಳ ಚಿಕಿತ್ಸೆಯಲ್ಲಿ ಸಾಕಷ್ಟು ಪ್ರತಿಕೂಲ ಪರಿಣಾಮಗಳು ಉಂಟಾಗುತ್ತಿದ್ದು, ನೈಪುಣ್ಯತೆ ಇರುವ ಸಿಬ್ಬಂದಿಗಳನ್ನು ಕಳೆದುಕೊಳ್ಳಲಾಗದೆಂದು ಸದರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥರುಗಳು ಕೋರಿಕೊಂಡಿದ್ದರ ಹಿನ್ನೆಲೆಯಲ್ಲಿ ಸದರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಎ-ಗುಂಪಿಗೆ ಸೇರಿಸಿ, ಸದರಿ ಗುಂಪಿನಲ್ಲಿನ ಅಂತರ್-ಸಂಸ್ಥೆಗಳ ವರ್ಗಾವಣೆಗೆ ಹಾಗೂ ಸದರಿ ಗುಂಪಿನಿಂದ ಬೇರೆ ಗುಂಪಿಗೆ ವರ್ಗಾವಣೆ ಹೊಂದಲು ಯಾವುದೇ ಅವಕಾಶವಿರುವುದಿಲ್ಲವೆಂದು ವರ್ಗಾವಣೆ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಅದೇರೀತಿ ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಉತ್ಕೃಷ್ಟ ಮಟ್ಟದ ವೈದ್ಯಕೀಯ ಸಂಸ್ಥೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಅತ್ಯುನ್ನತ ವಿದ್ಯಾರ್ಹತೆ ಹಾಗೂ ಕಾರ್ಯಕ್ಷಮತೆ ಹೊಂದಿರುವ ಅಧಿಕಾರಿ/ಸಿಬ್ಬಂದಿಗಳು ಮಾತ್ರ ನೇಮಕಾತಿ ಹೊಂದಿದ್ದು, ಇಲ್ಲಿ ನೇಮಕಾತಿ ಹೊಂದಲು ಸಫಲರಾಗದಿದ್ದವರು ರಾಜ್ಯದ ಇತರೆ ವೈದ್ಯಕೀಯ ಸಂಸ್ಥೆಗಳು ಹಾಗೂ ಹೊಸ ವೈದ್ಯಕೀಯ ಕಾಲೇಜುಗಳಲ್ಲಿ ನೇಮಕಾತಿ ಹೊಂದಿದ ನಂತರ ವರ್ಗಾವಣೆ ರೂಪದಲ್ಲಿ

ಬರುತ್ತಿರುವುದು ಹಿಂಬಾಗಿಲ ಪ್ರವೇಶವಾದಂತಾಗುತ್ತದೆ. ಇದರಿಂದ ನಿಜವಾದ ಪ್ರತಿಭೆಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಈ ಪ್ರವೃತ್ತಿಯನ್ನು ತಡೆಯಬೇಕಾಗಿದ್ದರಿಂದ ಬೆಂಗಳೂರು ಮತ್ತು ಮೈಸೂರಿನಲ್ಲಿರುವ ವೈದ್ಯಕೀಯ ಕಾಲೇಜುಗಳನ್ನು ಬಿ-ಗುಂಪಿನಲ್ಲಿ ಸೇರಿಸಿದ್ದು, ಬೇರೆ ಗುಂಪಿನ ಸಂಸ್ಥೆಗಳಿಂದ ಬಿ-ಗುಂಪಿನಲ್ಲಿರುವ ಸಂಸ್ಥೆಗಳಿಗೆ ವರ್ಗಾವಣೆಗೆ ಅವಕಾಶವಿರುವುದಿಲ್ಲವೆಂದು ವರ್ಗಾವಣೆ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಒಂದೊಂದು ವೈದ್ಯಕೀಯ ಕಾಲೇಜನ್ನು ಸ್ಥಾಪಿಸಬೇಕೆನ್ನುವುದು ಸರ್ಕಾರದ ನೀತಿಯಾಗಿದ್ದು, ಅದೇರೀತಿ 2006-07ನೇ ಸಾಲಿನಲ್ಲಿ ಮಂಡ್ಯ, ಹಾಸನ, ಶಿವಮೊಗ್ಗ, ಬೆಳಗಾವಿ, ಹೀಗೆ ಇನ್ನೂ ಮುಂತಾದ ಜಿಲ್ಲೆಗಳಲ್ಲಿ ಹೊಸದಾಗಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲಾಗಿರುತ್ತದೆ. ಈ ಕಾಲೇಜುಗಳು ವ್ಯವಸ್ಥಿತ ಕಟ್ಟಡ ಸೌಲಭ್ಯ, ಬೋಧಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ಉತ್ತಮ ವಸತಿ ವ್ಯವಸ್ಥೆ, ಪ್ರಯೋಗಾಲಯಗಳು, ಅವಶ್ಯಕ ಉಪಕರಣಗಳು, ಗ್ರಂಥಾಲಯ ವ್ಯವಸ್ಥೆ, ವಾಹನ ಸೌಲಭ್ಯ, ನುರಿತ ಬೋಧನಾ ಸಿಬ್ಬಂದಿ ಹಾಗೂ ಇನ್ನಿತರೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿದ್ದು, ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೌಲಭ್ಯಗಳನ್ನು ಕಲ್ಪಿಸಲು ಪೂರ್ಣ ಮಟ್ಟದಲ್ಲಿ ಸುಸಜ್ಜಿತವಾಗಿರುತ್ತವೆ. ಸದರಿ ಸಂಸ್ಥೆಗಳ ಮಾನ್ಯತೆಯನ್ನು ನವೀಕರಿಸಲು ಎಲ್ಲಾ ಸೌಲಭ್ಯಗಳನ್ನು ಹೊಂದಿರುವ ಬಗ್ಗೆ ಪರಿಶೀಲಿಸಲು ಎಂ.ಸಿ.ಐನಿಂದ ತಪಾಸಣಾ ತಂಡವು ಆಗಮಿಸಿದ ಸಂದರ್ಭದಲ್ಲಿ ಬೋಧಕ ಸಿಬ್ಬಂದಿಗಳ ಕೊರತೆ ಇದ್ದುದನ್ನು ಆಕ್ಷೇಪಿಸಲಾಗಿರುತ್ತದೆ. ಇದರಿಂದ ವೈದ್ಯಕೀಯ ಕಾಲೇಜುಗಳ ಶೈಕ್ಷಣಿಕ ಮಾನ್ಯತೆ ರದ್ದಾಗುವ ಸಂಭವವಿರುತ್ತದೆ. ಆದ್ದರಿಂದ ಈ ಸಂಸ್ಥೆಗಳಿಂದ ವ್ಯಾಪಕವಾಗಿ ಬೋಧಕ ಸಿಬ್ಬಂದಿಗಳನ್ನು ವರ್ಗಾವಣೆ ಮಾಡದಿರಲು ನಿಶ್ಚಯಿಸಿ ಈ ವೈದ್ಯಕೀಯ ಕಾಲೇಜುಗಳನ್ನು ಸಿ-ಗುಂಪಿನಲ್ಲಿ ಸೇರಿಸಲಾಗಿರುತ್ತದೆ. ಸಿ-ಗುಂಪಿನ ಸಂಸ್ಥೆಗಳಿಂದ ಡಿ-ಗುಂಪಿನ ಸಂಸ್ಥೆಗಳಿಗೆ ಮಾತ್ರ ಮಿತಿಗೊಳಪಟ್ಟು ವೈದ್ಯರ ವರ್ಗಾವಣೆಗೆ ಅವಕಾಶ ನೀಡಲಾಗಿರುತ್ತದೆ.

ಸರ್ಕಾರದ ನೀತಿಯಂತೆ 2015-16 ನೇ ಸಾಲಿನಲ್ಲಿ ವೈದ್ಯಕೀಯ ಕಾಲೇಜುಗಳಿರದ ಕೊಪ್ಪಳ, ಕಾರವಾರ, ಚಾಮರಾಜನಗರ, ಹೀಗೆ ಇನ್ನೂ ಮುಂತಾದ ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜುಗಳನ್ನು ಹೊಸದಾಗಿ ಪ್ರಾರಂಭಿಸಲಾಗಿರುತ್ತದೆ. ಈ ಕಾಲೇಜುಗಳು ರೋಗಿಗಳಿಗೆ ಉತ್ತಮ ಆರೋಗ್ಯ ಸೌಲಭ್ಯಗಳನ್ನು ಕಲ್ಪಿಸಲು ಇನ್ನೂ ಸಜ್ಜಾಗಬೇಕಾಗಿದ್ದು, ಈ ನಡುವೆ ಸದರಿ ಹೊಸ ಕಾಲೇಜುಗಳ ಬೋಧಕ ಸಿಬ್ಬಂದಿಗಳನ್ನು ಬೇರೆಡೆಗೆ ವರ್ಗಾಯಿಸಿದಲ್ಲಿ ಎಂ.ಸಿ.ಐ ತಂಡದವರು ತಪಾಸಣೆಗೆ ಬಂದಾಗ ಬೋಧಕ ಸಿಬ್ಬಂದಿಗಳ ಕೊರತೆ ಇರುವುದನ್ನು ತೀವ್ರವಾಗಿ ಆಕ್ಷೇಪಿಸುವ ಸಂದರ್ಭ ಉಂಟಾಗುತ್ತದೆ. ಈ ಹಿಂದೆ ಕೊಪ್ಪಳ, ಚಾಮರಾಜನಗರ ವೈದ್ಯಕೀಯ ಕಾಲೇಜುಗಳಲ್ಲಿ ಈ ರೀತಿಯ ಸಂದರ್ಭ ಉಂಟಾಗಿದ್ದರಿಂದ ಹೊಸ ಕಾಲೇಜುಗಳ ಮಾನ್ಯತೆಯು ರದ್ದಾಗುವ ತೊಂದರೆಯನ್ನು ತಪ್ಪಿಸಲು ಈ ಕಾಲೇಜುಗಳಿಂದ ಯಾವುದೇ ಬೋಧಕ ಸಿಬ್ಬಂದಿಗಳನ್ನು ವರ್ಗಾವಣೆ ಮಾಡದಿರಲು ನಿರ್ಧರಿಸಿ ಈ ಹೊಸ ಕಾಲೇಜುಗಳನ್ನು ಡಿ-ಗುಂಪಿನಲ್ಲಿ ಸೇರಿಸಲಾಗಿರುತ್ತದೆ. ಡಿ-ಗುಂಪಿನ ಸಂಸ್ಥೆಗಳಿಂದ ಸಿ-ಗುಂಪಿನ ಸಂಸ್ಥೆಗಳಿಗೆ ವರ್ಗಾವಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಸಲಾಗಿರುತ್ತದೆ.

ಅದೇ ರೀತಿ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗಳನ್ನು 'ಇ' ಗುಂಪಿನಲ್ಲಿ ಸೇರಿಸಲಾಗಿರುತ್ತದೆ.

ಆದಾಗ್ಯೂ, ಪತಿ-ಪತ್ನಿ ವರ್ಗಾವಣೆ ಪ್ರಸ್ತಾವನೆಗಳಿಗೆ ವಿನಾಯಿತಿ ನೀಡಲಾಗಿರುತ್ತದೆ ಹಾಗೂ ಎ-ಗುಂಪು ಹೊರತುಪಡಿಸಿ ಪ್ರತಿ ಗುಂಪಿನಲ್ಲಿನ ಸಂಸ್ಥೆಗಳ ಮಧ್ಯೆ ವೈದ್ಯರುಗಳ ವರ್ಗಾವಣೆಗೆ ಅವಕಾಶ ಕಲ್ಪಿಸಲಾಗಿರುತ್ತದೆ.

ಅಂತರ್-ಸಂಸ್ಥೆಗಳ ವರ್ಗಾವಣೆಗಳಿಂದಾಗಿ ಸಂಸ್ಥೆಗಳಲ್ಲಿನ ಬೋಧಕ ಸಿಬ್ಬಂದಿಗಳ ಜೇಷ್ಠತಾ ಪಟ್ಟಿಯಲ್ಲಿ ವ್ಯತ್ಯಾಸಗಳಾಗಿ ಇದರ ವಿರುದ್ಧ ಸಾಕಷ್ಟು ವೈದ್ಯರು ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿ ಸರ್ಕಾರದ ಅಮೂಲ್ಯ ಸಮಯವನ್ನು ವ್ಯರ್ಥ ಮಾಡುತ್ತಿದ್ದರಿಂದ ಮತ್ತು ಬೋಧಕ ಸಿಬ್ಬಂದಿಗಳ ವರ್ಗಾವಣೆಯಿಂದ ವೈದ್ಯರುಗಳ

ಕೊರತೆ ಉಂಟಾಗಿ ಎಂ.ಸಿ.ಐನವರು ಕಾಲೇಜಿನ ಮಾನ್ಯತೆಯನ್ನು ರದ್ದುಪಡಿಸುವುದನ್ನು ತಪ್ಪಿಸುವ ಹಿತದೃಷ್ಟಿಯಿಂದ ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ವರ್ಗಾವಣೆಗೆ ಮಾರ್ಗಸೂಚಿಗಳನ್ನು ರೂಪಿಸಿ ಸರ್ಕಾರಿ ಆದೇಶ ಸಂಖ್ಯೆ:ಎಂಇಡಿ 95 ಆರ್ ಜಿಯು 2019, ದಿನಾಂಕ:31.12.2019 ಹಾಗೂ ತಿದ್ದುಪಡಿ ದಿನಾಂಕ:10.02.2020ರಲ್ಲಿ ಆದೇಶಿಸಲಾಗಿರುತ್ತದೆ. ಆಡಳಿತಾತ್ಮಕ ಹಿತದೃಷ್ಟಿಯಿಂದ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳನ್ನು ಎ, ಬಿ, ಸಿ, ಡಿ ಮತ್ತು ಇ ಗುಂಪುಗಳೆಂದು ವಿಂಗಡಿಸಲಾಗಿದ್ದು, ಇದರಲ್ಲಿ ಯಾವುದೇ ಪ್ರಾದೇಶಿಕ/ಪ್ರಾಂತ್ಯವಾರು ಅನ್ಯಾಯ ಹಾಗೂ ತಾರತಮ್ಯವನ್ನು ಉಂಟು ಮಾಡುವ ಉದ್ದೇಶ ಸರ್ಕಾರದ ಮುಂದಿರುವುದಿಲ್ಲ.

**ಸಂಖ್ಯೆ: ಎಂಇಡಿ 190 ಎಂಪಿಎಸ್ 2021**

**(ಡಾ|| ಕೆ. ಸುಧಾಕರ್)**
ವೈದ್ಯಕೀಯ ಶಿಕ್ಷಣ ಸಚಿವರು